ಕೇಳಿದ್ದೆ. ಆದರೆ, ಅವಳಂತೆ ಮುಖಕ್ಕೆ ಮಾತನ್ನು ವಗಾಯಿಸುವವರನ್ನು ನೋಡಿರಲಿಲ್ಲ. ಈ ಘಟನೆಯ ನಂತರ ಅವಳನ್ನು ಹಿಂದೆ ಆಡಿಕೊಂಡು ನಗುತ್ತಿದ್ದವರು, ಆಡಿಕೊಳ್ಳಲು ಹೆದರುತ್ತಿದ್ದರು. ನಾನು ನನ್ನ ವೃತ್ತಿಬದುಕಿನಲ್ಲಿ ಗಯ್ಯಾಳಿಯಾದ, ಜಗಳಗಂಟಿಯಾದ, ಒರಟು, ಏರುಧ್ವನಿಯಲ್ಲಿ ಮಾತಾಡುವ ಘಟಾನುಘಟಿಗಳನ್ನು ನೋಡಿದ್ದೆ. ಆದರೆ, ಸೌಮ್ಯಮುಖದ, ಮೋಹಕನಗೆಯ, ಸುಂದರ, ನಾಜೂಕಾದ ಹೆಣ್ಣು ಇಷ್ಟು ಕಟುವಾಗಿ ಮಾತಾಡುವುದನ್ನು ನೋಡಿರಲಿಲ್ಲ. ಮಾತಿಗೆ ಮುಂಚೆ ವ್ಯಂಗ್ಯ ನಗೆ ನಗುವ, ಮೊನಚು ಮಾತಾಡುವ ಅವಳು ನನಗೆ ಇಷ್ಟವಾಗಲಿಲ್ಲ ಎನ್ನುವುದಕ್ಕಿಂತ, ನಾನು ಇಷ್ಟಪಟ್ಟು ಮಾತಾಡಿಸಿದರೂ ಅವಳೇನು ನನ್ನ ಬಳಿ ಮಾತಾಡುವುದಿಲ್ಲ ಎನಿಸಿತು. ನನ್ನ ಯೋಗ್ಯತೆಗೆ ಮೀರಿದವರನ್ನು ಮಾತಾಡಿಸಬಾರದು ಎನ್ನುವ ಸಿದ್ಧಾಂತಕ್ಕೆ ಜೋತುಬಿದ್ದಿದ್ದ ನಾನು ಅವಳನ್ನು ಮಾತಾಡಿಸುವ ಗೋಜಿಗೆ ಹೋಗಲಿಲ್ಲ.

ಪ್ರಪಂಚದ ಒಳ್ಳೆಯ ಗುಣಗಳೆಲ್ಲ ನನ್ನ ಬಳಿಯೇ ಇವೆಯೇನೋ ಎನ್ನುವ ಮನೋಭಾವ ನನ್ನದು. ಎಲ್ಲಿದ್ದರೂ ಕೃತಕ ಗಾಂಭೀರ್ಯವನ್ನು ಬಿಟ್ಟುಕೊಡದೆ, ಆವಶ್ಯಕತೆಗೂ ಮೀರಿ ತನ್ನತನ(ಸಣ್ಣತನ!)ವನ್ನು ತೋರಿಸಿಕೊಳ್ಳುವ ಗುಣದವಳು. ಒಮ್ಮೆ ಇಂತಹ ಗಂಭೀರವಂತೆಯ ಹಿಂದಿನ ಮಷಿನ್‌ನಲ್ಲಿ ಕುಳಿತು ಕೆಲಸಮಾಡಬೇಕಾದ ಸಂದರ್ಭ ನನಗೆ ಎದುರಾಯಿತು. ವಿಶ್ವಸುಂದರಿಯ ಹಿಂದೆ ನನ್ನಂತವಳು ಕುಳಿತು ಕೆಲಸ ಮಾಡಬೇಕಾಗಿ ಬಂದಿರುವುದು ವಿಧಿಯಾಟವಲ್ಲವೇ! ಅವಳು ಮಾಡಿದ ಕೆಲಸವನ್ನು ಮುಂದುವರಿಸಬೇಕಿತ್ತು. ಅವಳೊ ಬಾಲ್ಯವನ್ನು ಮರೆಯದವಳು. ನೀರಿನ ಬಾಟಲ್‌ನ ಮುಚ್ಚಳಕ್ಕೆ ತೂತುಮಾಡಿ ಹಾದಿಯಲ್ಲಿ ಓಡಾಡುವವರ ಮೇಲೆಲ್ಲ ನೀರು ಚಿಮ್ಮಿಸಿ ಖುಷಿ ಪಡುತ್ತಿದ್ದಳು. ಅವಳ ಬಾಲಿಶತನಕ್ಕೆ ನಗುಬಂದರೂ, ನಾನು ನಗುತ್ತಿರಲಿಲ್ಲ. ಹಾಗೆ ನಕ್ಕರೆ ನನ್ನ ಗಾಂಭೀರ್ಯದ ಗತಿ! ನನ್ನ ಗಾಂಭೀರ್ಯಕ್ಕೆ ಕುತ್ತು ತರುವ ಯಾವುದೇ ಕೆಲಸ ನಾನು ಮಾಡವುದಿಲ್ಲ. ಆದರೆ, ಆ ಪಾಪಿ ನಾನು ಎಲ್ಲರಂತೆ ಎಂದು ತಿಳಿದು ನನ್ನ ಬೆನ್ನ ಮೇಲೆ ನೀರು ಹಾಕಿಬಿಡೋದೆ! ಆ ಕ್ಷಣ ನಾನು ತಪೋಭಂಗಗೊಂಡ ಮುಕ್ಕಣ್ಣನಾಗಿಬಿಟ್ಟೆ. ನನ್ನ ಉರಿಗಣ್ಣು ಅವಳತ್ತ ನೋಡಿದಾಗ, ಸುಟ್ಟು ಬೂದಿಯಾಗದಿದ್ದರೂ ಹೆದರಿಯೇಬಿಟ್ಟಳು. ತುಂಬಾ ಹೊತ್ತು ಏನು ಮಾತಾಡಲಿಲ್ಲ. ನಂತರ ಬಾಬು ಹೇಳಿಕೊಟ್ಟನೇನೋ 'ಸ್ಸಾರಿ' ಎಂದಳು. ನನಗೆ ಇನ್ನೂ ಕೋಪ ಕಡಿಮೆಯಾಗಿರಲಿಲ್ಲ. ಅವಳು ಹಾಗೆ ಮಾಡಿದ್ದರಿಂದ ನನ್ನ ಘನತೆ ಹಾಳಾಗಿತ್ತು; ನನ್ನ ಲೆಕ್ಕದಲ್ಲಿ. ಯಾಕೆಂದರೆ ನಾನು ಎಷ್ಟೋ ವರ್ಷಗಳಿಂದ ಅದನ್ನು ಕಾಪಾಡಿಕೊಂಡು ಬಂದಿದ್ದೇನೆ. ಅವಳು ಅದನ್ನು ಹಾಳು ಮಾಡುವುದೆಂದರೆ ತಮಾಷೆಯೆ? ಅದಕ್ಕೆ ಸೇಡು ತೀರಿಸಿಕೊಳ್ಳಬೇಕಿತ್ತು. ಸೇಡು ತೀರಿಸಿಕೊಂಡ ಮೇಲೆ ಅಲ್ಲವೆ ಸಮಾಧಾನ. ಅವಳು ಮಾಡಿಕೊಟ್ಟ ಪೀಸ್‌ಗಳನ್ನು 'ಸರಿಯಿಲ್ಲ' ಎಂದು ಎತ್ತಿ ಎತ್ತಿ ಹಿಂದೆ ಬಿಸಾಕತೊಡಗಿದೆ. ಆಗ ಅವಳಿಗೆ ತನ್ನ ತಪ್ಪಿನ ಅರಿವಾಗಿರಬೇಕು. ಬಾಟಲನ್ನು ಎತ್ತಿ ಡಸ್ಟ್ ಬಿನ್‌ಗೆ ಹಾಕಿ, ನನಗಿಂತ ಗಂಭೀರವಾಗಿ ಕೆಲಸ ಮುಂದುವರಿಸಿದಳು. ಅವಳ ನಗು ನೋಡುತ್ತಿದ್ದ ನನಗೆ ಅವಳ ಈ ಗಂಭೀರ ಮುಖಮುದ್ರೆ ನೋಡುವುದು ಸಾಧ್ಯವಾಗದೆ, 'ಮತ್ತೆ ಹಾಗೆಲ್ಲ ಮಾಡ್ಬೇಡಿ ನನಗೆ ಇಷ್ಟ ಆಗಲ್ಲ' ಎನ್ನುವುದರೊಂದಿಗೆ 'ಇನ್ನು ಮುಂದೆ ನೀನು ಮೊದಲಿನಂತೆ ಇರಬಹುದು' ಎಂದು ಪರವಾನಗಿ ನೀಡಿದೆ. ಅವಳೊ ತುಂಬಾ ಮಾತುಗಾರ್ತಿ; ಪ್ರಪಂಚದ ಸೌಂದರ್ಯವನ್ನೆಲ್ಲ ತುಂಬಿಕೊಂಡಿರುವ ಅವಳು ಮಾತಾಡುವಾಗ ಚೆನ್ನಾಗಿ ಕಾಣುತ್ತಾಳೆ. ನಕ್ಕರೆ ಗಂಡಸರು ಮೂರ್ಛೆ ಹೋಗಬೇಕು, ಅಂತಹ ನಗು ಅವಳದ್ದು. ಆ ನಗು, ಆ ಮಾತುಗಳನ್ನು ನನ್ನ ಕಠೋರ ವರ್ತನೆಯಿಂದ ಕಿತ್ತುಕೊಳ್ಳುವುದು ಎಷ್ಟು ಸರಿ? ಆದುದರಿಂದ ಸ್ವಲ್ಪ ದಿನದಲ್ಲಿಯೇ ನನ್ನ ಬಡಿವಾರ ಪಕ್ಕಕ್ಕಿಟ್ಟು, ಅವಳ ಮಾತು ಮತ್ತು ನಗುವಿನ ಜೊತೆಗೆ ಸೇರಿಕೊಂಡುಬಿಟ್ಟೆ.